ಕರ್ನಾಟಕ ಸರ್ಕಾರ

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ,ಬೆಂಗಳೂರು ಹಾಗೂ ಅಧ್ಯಕ್ಷರು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು, ಇವರು ಹೊರಡಿಸಿದ ನಡವಳಿಗಳು:**

ವಿಷಯ : ಕೋವಿಡ್-19, ಮಹಾಮಾರಿಯ ಸೋಂಕಿನ ಕಾರಣ ಸರ್ಕಾರದ ಬಾಲಮಂದಿರಗಳಲ್ಲಿ, ವೀಕ್ಷಣಾಲಯಗಳಲ್ಲಿ ತೆರೆದ ತಂಗುದಾಣ, ಅರ್ಹ ಸಂಸ್ಥೆ, ಪ್ಲೇಸ್ ಆಫ್ ಸೇಫ್ಟಿ ಸಂರಕ್ಷಣೆಯಲ್ಲಿದ್ದ ಮಕ್ಕಳನ್ನು ಸುರಕ್ಷತೆಯ ಕಾರಣದಿಂದ ಮನೆಗೆ ಬಿಡುಗಡೆ ಮಾಡಿದ್ದು, ಅವರುಗಳಿಗೆ ಆರ್ಥಿಕ ಧನ ಸಹಾಯ ನೀಡುವ ಬಗ್ಗೆ.

ಉಲ್ಲೇಖ : 1. ಕೋವಿಡ್-19 ರ ಸಂಬಂಧ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ4/2020 ದಿನಾಂಕ 03/04/2020.

*******

**ಪ್ರಸ್ತಾವನೆ :**

ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ಮಕ್ಕಳು, ಮಕ್ಕಳ ಕಲ್ಯಾಣ ಸಮಿತಿ ಆದೇಶದ ಮೇರೆಗೆ ಬಾಲಮಂದಿರಗಳಲ್ಲಿ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳು ಬಾಲನ್ಯಾಯ ಮಂಡಲಿಯ ಆದೇಶದ ಮೇರೆಗೆ ವೀಕ್ಷಣಾಲಯಗಳಲ್ಲಿ ರಕ್ಷಣೆ ಮತ್ತು ಪೋಷಣೆ ಮತ್ತು ಪುನರ್ವಸತಿಗಾಗಿ ದಾಖಲಾಗಿರುತ್ತಾರೆ. ಕೋವಿಡ್-19 ಸೋಂಕು ಸಾಂಕ್ರಾಮಿಕವಾಗಿ ರಾಜ್ಯದಲ್ಲಿ ಹರಡಿದ್ದು, ಮಕ್ಕಳ ಹಿತ ದೃಷ್ಟಿಯಿಂದ, ಸಂಸ್ಥೆಯಲ್ಲಿ ಮಕ್ಕಳ ಸಾಂದ್ರತೆ ಕಡಿಮೆಗೊಳಿಸಲು ಹಾಗೂ ಪೋಷಕರು ಮಕ್ಕಳನ್ನು ಕರೆದುಕೊಂಡು ಹೋಗಲು ಸಿದ್ದವಿದ್ದ ಮಕ್ಕಳನ್ನು, ಮಕ್ಕಳ ಹಿತದೃಷ್ಟಿಯಿಂದ ಮನೆಗಳಿಗೆ, ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಲಿಯ ಆದೇಶದನ್ವಯ ರಜೆಯ ಮೇಲೆ ತೆರಳಲು/ಸಂಸ್ಥೆಯಿಂದ ಬಿಡುಗಡೆ ಮಾಡಿ ಪೋಷಕರ ವಶಕ್ಕೆ ಕಳುಹಿಸಲಾಗಿದೆ. ಈ ಮಕ್ಕಳು ವಿವಿಧ ಸಾಮಾಜಿಕ ಕಾರಣಗಳಿಂದ, ಕುಟುಂಬದಲ್ಲಿ ಆರೈಕೆ ಮಾಡಲು ಅಸಮರ್ಥಕರಾದ ಪೋಷಕರ ಮಕ್ಕಳಾಗಿರುತ್ತಾರೆ. ಈ ಮಕ್ಕಳನ್ನು ಮನೆಗೆ ಕಳುಹಿಸಿದ್ದು, ಈ ಮಕ್ಕಳ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಕೂಡ ಸದೃಡವಾಗಿರದೇ ಮಕ್ಕಳನ್ನು ನೋಡಿಕೊಳ್ಳಲು ಕಷ್ಟಸಾಧ್ಯವಾಗುತ್ತಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲವು ದೇಶದಲ್ಲಿ ಕೋವಿಡ್-19 ಸಂಕ್ರಾಮಿಕ ಮಹಾಮರಿ ಹರಡುತ್ತಿರುವ ಹಿನ್ನಲೆಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ತುರ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ದಿನಾಂಕ 03/04/2020ರಂದು ಉಲ್ಲೇಖ-01ರ ಆದೇಶ ಹೊರಡಿಸಿರುತ್ತದೆ. ಮಕ್ಕಳ ಹಿತದೃಷ್ಟಿಯಿಂದ ಅವರವರ ಕುಟುಂಬ/ ಮನೆಗೆ ಕಳುಹಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸಹ ತಿಳಿಸಿ ರಾಜ್ಯ ಸರ್ಕಾರಗಳಿಗೆ ಈ ರೀತಿಯ ನಿರ್ದೇಶನ ನೀಡಿರುತ್ತದೆ.

**"Ensure availability of adequate food, drinking water & other necessities such as clean clothes, menstrual hygiene products".**

Scanned with CamScanner

ಮುಂದುವರೆದು, ಸಂಸ್ಥೆಯಲ್ಲಿ ಮಕ್ಕಳನ್ನು ನೋಡಿಕೊಳ್ಳಲು, ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿಯಲ್ಲಿ, ಪ್ರತಿ ಸಂಸ್ಥೆಗೆ ಆವರ್ತಕ ವೆಚ್ಚದಡಿಯಲ್ಲಿ ಮಕ್ಕಳ ಊಟೋಪಚಾರ ಹಾಗೂ ಔಷದೋಪಚಾರಕ್ಕಾಗಿ ತಿಂಗಳಿಗೆ ರೂ 2160 (ಉಟೋಪಚಾರಕ್ಕಾಗಿ ರೂ 1480 ಹಾಗೂ ಔಷದೋಪಚಾರ ಹಾಗೂ ಇತರೆ ವೆಚ್ಚಕ್ಕಾಗಿ ರೂ 680) ಭರಿಸಲು ಅವಕಾಶವಿದೆ. (Maintenance @ Rs.2000 per Child per month (Food, @ Rs.1400 and Rs.600 for clothing, medicine, Soap, Oil, etc., enhanced by 8%) ಹಾಲಿ ಮಕ್ಕಳು ಕುಟುಂಬದ ಆರೈಕೆಯಲ್ಲಿದ್ದು, ಮಕ್ಕಳ ಸುರಕ್ಷತೆಯೇ ಸರ್ಕಾರದ ಆಧ್ಯತೆ ಆಗಿರುವುದರಿಂದ ಮಗುವಿನ ಹಿತದೃಷ್ಟಿಯಿಂದ ಆರ್ಥಿಕ ಧನ ಸಹಾಯದ ಅವಶ್ಯಕತೆಯನ್ನು ಮನಗಾಣಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕೋವಿಡ್-19 ಸೋಂಕಿನ ಕಾರಣ (ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಯ ಆದೇಶದಂತೆ) ಮನೆಗಳಿಗೆ ಸಂಸ್ಥೆಯಿಂದ ರಜೆಯ/ಬಿಡುಗಡೆ ಮೇರೆಗೆ ಪೋಷಕರ ವಶಕ್ಕೆ ಒಪ್ಪಿಸಿರುವ ಮಕ್ಕಳಿಗೆ ಕುಟುಂಬದಲ್ಲಿ ಅಗತ್ಯ ಪೋಷಣೆ ಒದಗಿಸುವ ಸಲುವಾಗಿ ಮಾಸಿಕ ರೂ.1,500(ಒಂದು ಸಾವಿರದ ಐನೂರು)ಗಳ ಆರ್ಥಿಕ ಧನ ಸಹಾಯವನ್ನು ಏಪ್ರಿಲ್-2020 ಮತ್ತು ಮೇ-2020 ಎರಡು ತಿಂಗಳ ಅವಧಿಗೆ ನೀಡಲು ತೀರ್ಮಾನಿಸಿದ್ದು, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸಂ:ಕೆಎಸ್‌ಐಸಿಪಿಎಸ್: ಕೋವಿಡ್-19 /20-21 ದಿನಾಂಕ:04.05.2020

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಸರ್ವೋಚ್ಚ ನ್ಯಾಯಾಲಯಾದ ಆದೇಶದಂತೆ ಮಕ್ಕಳ ಸುರಕ್ಷತೆಯೇ ಆಧ್ಯತೆ ಆಗಿರುವುದರಿಂದ, ಕೋವಿಡ್ ಸಾಂಕ್ರಾಮಿಕದ ಕಾರಣ ಬಾಲಮಂದಿರ/ ಅರ್ಹಸಂಸ್ಥೆ/ವೀಕ್ಷಣಾಲಯಗಳಲ್ಲಿ/ಪ್ಲೇಸ್ ಆಫ್ ಸೇಫ್ಟಿ/ವಿಶೇಷ ಗೃಹ ಮತ್ತು ತೆರದ ತಂಗುದಾಣಗಳಲ್ಲಿ ಸಂರಕ್ಷಣೆಯಲ್ಲಿದ್ದ, ಕೋವಿಡ್-19 ಹಿನ್ನೆಲೆಯಲ್ಲಿ ಪೋಷಕರ ವಶಕ್ಕೆ (ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಲಿಯ ಆದೇಶದಂತೆ) ಬಿಡುಗಡೆ/ರಜೆಯ ಮೇಲೆ ತೆರಳಿದ ಮಕ್ಕಳ ಪೋಷಣೆಗಾಗಿ <u>ಪ್ರತಿ ಮಗುವಿಗೆ, ಮಾಸಿಕ ರೂ.1500(ಒಂದು ಸಾವಿರದ ಐನೂರು)ಗಳನ್ನು ಏಪ್ರಿಲ್-2020 ಮತ್ತು ಮೇ-2020 ಎರಡು ತಿಂಗಳ ಅವಧಿಗೆ ಅನುಬಂಧದಲ್ಲಿ ವಿವರಿಸಿರುವಂತೆ ಆರ್ಥಿಕ ಧನ ಸಹಾಯವನ್ನು ಮಂಜೂರಾತಿ ನೀಡಿ ಆದೇಶಿಸಿದೆ.</u>

ಈ ಅನುದಾನವನ್ನು ಆಯಾ ಜಿಲ್ಲೆಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಖಾತೆಯಲ್ಲಿ ಲಭ್ಯವಿರುವ ಸಾಧಿಲ್ವಾರು ವೆಚ್ಚದಡಿಯಲ್ಲಿ 2020-21ನೇ ಸಾಲಿನಲ್ಲಿ ಭರಿಸತಕ್ಕದ್ದು.

Scanned with CamScanner

ಷರತ್ತುಗಳು

1. ಕೋವಿಡ್–19, ಮಹಾಮಾರಿಯ ಕಾರಣ ಸಂಸ್ಥೆಯಿಂದ ಬಾಲನ್ಯಾಯ ಮಂಡಲಿ/ಮಕ್ಕಳ ಕಲ್ಯಾಣ ಸಮಿತಿಯ ಆದೇಶದಂತೆ ಬಿಡುಗಡೆ ಮಾಡಿ ಮನೆಗೆ ಕಳುಹಿಸಿರುವ ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ. ಬಾಲನ್ಯಾಯ ಮಂಡಲಿ/ಮಕ್ಕಳ ಕಲ್ಯಾಣ ಸಮಿತಿಯ ಆದೇಶ ಲಭ್ಯವಿಲ್ಲದ ಮಕ್ಕಳಿಗೆ ಆರ್ಥಿಕ ನೆರವನ್ನು ನೀಡಲು ಅವಕಾಶವಿಲ್ಲ.
2. ಅನುದಾನವನ್ನು ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಜಂಟಿ ಖಾತೆಯಿಂದ ನೇರವಾಗಿ ಮಗುವಿನ ಖಾತೆ/ಪೋಷಕರ ಬ್ಯಾಂಕ್ ಖಾತೆ/(ಆದ್ಯತೆ ಮೇರೆಗೆ ತಾಯಿಯ ಖಾತೆಗೆ) ಆರ್.ಟಿ.ಜಿ.ಎಸ್ ಮೂಲಕ ನೇರವಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಜಮೆ ಮಾಡುವುದು.
3. ಅನುದಾನ ಬಿಡುಗಡೆ ಮಾಡಿರುವ ಮಾಹಿತಿಯನ್ನು ಮಗುವಿಗೆ / ಕುಟುಂಬಕ್ಕೆ ದೂರವಾಣಿ ಮೂಲಕ ನೀಡುವುದು.
4. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಆರ್.ಟಿ.ಜಿ.ಎಸ್. ಮಾಡಿದ ನಂತರ ಯುಟಿಆರ್ ನಂಬರ್‌ನೊಂದಿಗೆ ಮಾಹಿತಿಯನ್ನು ಪ್ರಧಾನ ಕಛೇರಿಗೆ ಸಲ್ಲಿಸುವುದು.

ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ
ರಕ್ಷಣಾ ಸೊಸೈಟಿ, ಬೆಂಗಳೂರು

ಪ್ರತಿಯನ್ನು:

1. ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
2. ಲೆಕ್ಕಾಧಿಕಾರಿಗಳು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು, ಇವರ ಮಾಹಿತಿಗಾಗಿ ಹಾಗೂ ಮುಂದಿನ ತಕ್ಷಣದ ಕ್ರಮಕ್ಕಾಗಿ.
3. ಕಛೇರಿ ಪ್ರತಿ

Scanned with CamScanner

**ಅನುಬಂಧ**

| ಕ್ರಮ ಸಂ | ಜಿಲ್ಲೆಗಳ ಹೆಸರು | ಸರ್ಕಾರ ಅನುದಾನಿತ ಸಂಸ್ಥೆಗಳ ಸಂಖ್ಯೆ | ಕೋವಿಡ್-19ರ ಕಾರಣ ಸಂಸ್ಥೆಗಳಿಂದ ಬಿಡುಗಡೆ ಮಾಡಿರುವ ಮಕ್ಕಳ ಸಂಖ್ಯೆ | ಎರಡು ತಿಂಗಳಿಗೆ ರೂ.1500/-ಗಳಂತೆ (ಏಪ್ರಿಲ್ ಹಾಗೂ ಮೇ-2020) ಆರ್ಥಿಕ ಧನ ಸಹಾಯ ನೀಡಲು ಮಂಜೂರಾತಿ ನೀಡಿದ ಮೊತ್ತ |
|---|---|---|---|---|
| 1 | ಬಾಗಲಕೋಟೆ | 6 | 118 | 354000 |
| 2 | ಬೆಳಗಾವಿ | 8 | 117 | 351000 |
| 3 | ವಿಜಯಪುರ | 11 | 234 | 702000 |
| 4 | ಧಾರವಾಡ | 7 | 120 | 360000 |
| 5 | ಗದಗ | 3 | 92 | 276000 |
| 6 | ಹಾವೇರಿ | 6 | 124 | 372000 |
| 7 | ಉತ್ತರ ಕನ್ನಡ | 4 | 45 | 135000 |
| 8 | ಶಿವಮೊಗ್ಗ | 5 | 113 | 339000 |
| 9 | ಬೆಂಗಳೂರು (ಗ್ರಾ) | 8 | 90 | 270000 |
| 10 | ರಾಮನಗರ | 3 | 46 | 138000 |
| 11 | ಚಿಕ್ಕಬಳ್ಳಾಪುರ | 3 | 40 | 120000 |
| 12 | ಚಿತ್ರದುರ್ಗ | 5 | 64 | 192000 |
| 13 | ದಾವಣಗೆರೆ | 8 | 104 | 312000 |
| 14 | ಕೋಲಾರ | 4 | 19 | 57000 |
| 15 | ಬೆಂಗಳೂರು (ನ) | 19 | 102 | 306000 |
| 16 | ತುಮಕೂರು | 3 | 36 | 108000 |
| 17 | ಬಳ್ಳಾರಿ | 5 | 99 | 297000 |
| 18 | ಬೀದರ್ | 4 | 102 | 306000 |
| 19 | ಕಲಬುರ್ಗಿ | 9 | 103 | 309000 |
| 20 | ಕೊಪ್ಪಳ | 3 | 81 | 243000 |
| 21 | ರಾಯಚೂರು | 3 | 82 | 246000 |
| 22 | ಯಾದಗಿರಿ | 1 | 10 | 30000 |
| 23 | ಚಾಮರಾಜನಗರ | 3 | 9 | 27000 |
| 24 | ಚಿಕ್ಕಮಗಳೂರು | 3 | 30 | 90000 |
| 25 | ದಕ್ಷಿಣ ಕನ್ನಡ | 3 | 51 | 153000 |
| 26 | ಹಾಸನ | 6 | 64 | 192000 |
| 27 | ಕೊಡಗು | 2 | 38 | 114000 |
| 28 | ಮಂಡ್ಯ | 4 | 30 | 90000 |
| 29 | ಮೈಸೂರು | 4 | 72 | 216000 |
| 30 | ಉಡುಪಿ | 3 | 9 | 27000 |
| | ಒಟ್ಟು | 156 | 2244 | 6732000 |

(ರೂ.ಅರವತ್ತೇಳು ಲಕ್ಷದ ಮೂವತ್ತೆರಡು ಸಾವಿರ ಮಾತ್ರ)

ಸದಸ್ಯ ಕಾರ್ಯದರ್ಶಿ,
ಕಾರ್ಯಕಾರಿ ಮಂಡಲಿ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
ಬೆಂಗಳೂರು

Scanned with CamScanner